**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ದಿನಾಂಕ:16/01/2021ರಂದು ನಡೆದ ವಾರ್ಡ್- 78 ಪುಲಿಕೇಶಿನಗರ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಸಂಖ್ಯೆ:ವಾರ್ಡ್-78 ಪಿ.ಆರ್/416 /20-21,

ದಿನಾಂಕ:16-01-2021

ದಿನಾಂಕ:16/01/2021 ರಂದು ಬೆಳಿಗ್ಗೆ 11:00 ಗಂಟೆಗೆ ವಾರ್ಡ್ ಸಮಿತಿ ಕಾರ್ಯ ಕಲಾಪಗಳ ಬಗ್ಗೆ ಚರ್ಚಿಸಲು ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಯಿತು.

**ಹಾಜರಿದ್ದ ಅಧಿಕಾರಿ/ ನೌಕರರುಗಳ ವಿವರ:-**

1) ಶ್ರೀ. ಸುಹೇಲ್ ಅಹಮ್ಮದ್, ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ.
2) ಶ್ರೀ. ಮೃತ್ಯುಂಜಯ, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಾರ್ಯದರ್ಶಿ ವಾರ್ಡ್-78, 6361559419
3) ಶ್ರೀಮತಿ. ಗಾಯತ್ರಿ ಜೆ, ಕಿರಿಯ ಆರೋಗ್ಯ ಪರಿವೀಕ್ಷಕರು, 9513157394.
4) ಸೋಮಶೇಖರ್ ರೆಡ್ಡಿ, ಕಿರಿಯ ಅಭಿಯಂತರರು ಬೆಸ್ಕಾಂ, 9449874813
5) ಶ್ರೀ. ಕುಮಾರೇಶನ್ ಮೇಸ್ತ್ರಿ ಗಾರ್ಡನ್, 9900526020.
6) ಶ್ರೀ. ರಾಜ ಎಸ್, ಮಾರ್ಷಲ್, 8095784243.

**ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು:-**

1) ಶ್ರೀಮತಿ. ನಳಿನಿ ಜಿ. ಐಯ್ಯರ್, ಅಧ್ಯಕ್ಷರು, ಫ್ರೇಜರ್ ಟೌನ್ RWA, 8310801615.
2) ಶ್ರೀ. ಸುಜಿತ್ ಸುಜನ್, ಕಾರ್ಯದರ್ಶಿಗಳು, ಫ್ರೇಜರ್ ಟೌನ್ RWA, 9845064240.
3) ಶ್ರೀಮತಿ. ಜ್ಯೋತಿ ದಿಲೀಪ್, ಸಮಿತಿ ಸದಸ್ಯರು, 8123074530.
4) ಶ್ರೀಮತಿ. ಹಜೀಬಾ ಸುಭಾನ್, ಆಯೋಜಕ ಕಾರ್ಯದರ್ಶಿ, ಫ್ರೇಜರ್ ಟೌನ್ RWA, 9108872059.
5) ಶ್ರೀ. ಖೈಷರ್ ಅಹಮದ್ ಜಿ ಎಸ್, RWA, 9741597110.
6) ಶ್ರೀ. ವೆಂಕಟಸುಬ್ರಮಣಿ, RWA, 9900072783.

**ಸಭೆಯಲ್ಲಿ ಗೈರುಹಾಜರಿದ್ದ ಅಧಿಕಾರಿ:-**

1) ಶ್ರೀ. ರವಿ ವಡ್ಡಾರ್. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
2) ಶ್ರೀಮತಿ. ಜ್ಯೋತಿ. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ)
3) ಶ್ರೀ. ಗುರುಮೂರ್ತಿ ಸಹಾಯಕ ಅಭಿಯಂತರರು (ಬೆಸ್ಕಾಂ) ಹಾಗೂ ವಾರ್ಡ್ ಕಾರ್ಯದರ್ಶಿ
4) ಶ್ರೀ. ಸತೀಶ್ ಸಹಾಯಕ ಅಭಿಯಂತರರು (ಜಿ.ಡಬ್ಲ್ಯೂ.ಎಸ್.ಎಸ್.ಬಿ) ಹಾಗೂ ವಾರ್ಡ್ ಕಾರ್ಯದರ್ಶಿ
5) ಸಹಾಯಕ ಕಂದಾಯ ಅಧಿಕಾರಿಗಳು (ಪುಲಿಕೇಶಿನಗರ) ಉಪ ವಿಭಾಗ
6) ಕ್ರೈಂ ಪೋಲಿಸ್ ಫ್ರೇಜರ್ ಟೌನ್.
7) ಟ್ರಾಫಿಕ್ ಪೋಲಿಸ್ ಫ್ರೇಜರ್ ಟೌನ್

Revenue Officer (Shivajinagar)
Bruhath Bangalore Mahanagara Palika

ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಸುಹೇಲ್ ಅಹಮ್ಮದ್ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.



ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ್ದ ವಿಷಯಗಳ ಬಗ್ಗೆ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಮತ್ತೊಮ್ಮೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಆರ್.ಡಬ್ಲ್ಯೂ.ಎ ಸದಸ್ಯರುಗಳಿಗೆ ಗುರುತಿನ ಚೀಟಿಗಳನ್ನು ನೋಡಲ್ ಅಧಿಕಾರಿಯವರು ವಿತರಿಸಿದರು.
2. ಎಸ್.ಡಬ್ಲ್ಯೂ.ಎಂ. ಎಸ್.ಡಬ್ಲ್ಯೂ.ಡಿ ಈ ಅಧಿಕಾರಿಗಳು ಸಭೆಗೆ ಪದೇ ಪದೇ ಗೈರು ಹಾಜರಾಗುತ್ತಿರುವ ಬಗ್ಗೆ ಚರ್ಚಿಸಲಾಯಿತು.
3. ಮೋರ್ ರಸ್ತೆ, ಮಾಸ್ಕ್ ರಸ್ತೆ ಮತ್ತು ಕೆ.ಎಸ್.ಎಫ್.ಸಿ ಎದುರುಗಡೆ ಇಲ್ಲಿನ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ಕ್ರಮಕೈಗೊಳ್ಳಲು ಚರ್ಚಿಸಲಾಯಿತು.
4. ಮಾಸ್ಕ್ ರಸ್ತೆ, ಸ್ಯಾಂಡರ್ಸ್ ರಸ್ತೆ ಇಲ್ಲಿ ಪುಟ್‌ಬಾತ್ ಡ್ರೈವ್‌ನನ್ನು ಕೈಗೊಂಡಿರುವ ಬಗ್ಗೆ ಚರ್ಚಿಸಲಾಯಿತು.
5. ಕೋಲ್ಸ್ ರಸ್ತೆಯಲ್ಲಿ ಟ್ರಾನ್ಸ್‌ಫರ್ಮರ್ ಪುಟ್‌ಬಾತ್ ಜಾಗದಲ್ಲಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಮತ್ತೊಮ್ಮೆ ಚರ್ಚಿಸಲಾಯಿತು.
6. ವೀಲರ್ ರಸ್ತೆಯ ಹೋಟೆಲ್ ಹತ್ತಿರ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾಲ್ವ್‌ನನ್ನು ಅಳವಡಿಸಲು ಚರ್ಚಿಸಲಾಯಿತು.
7. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬೀದಿ ದೀಪಗಳನ್ನು ಸೂಕ್ತವಾದ ರೀತಿಯಲ್ಲಿ ಅಳವಡಿಸಲು ಚರ್ಚಿಸಲಾಯಿತು.
8. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಚರಂಡಿಗಳು ಕಟ್ಟಿಕೊಂಡಿರುವ ಜಾಗಗಳನ್ನು ಪರಿಶೀಲಿಸಿ ಅದನ್ನು ದುರಸ್ತಿ ಮಾಡುವ ಬಗ್ಗೆ ಚರ್ಚಿಸಲಾಯಿತು.
9. ಪಾದಚಾರಿ ರಸ್ತೆಗಳಲ್ಲಿ ಮತ್ತು ಸಿಗ್ನಲ್‌ಗಳಲ್ಲಿ ಬಿಕ್ಷೆ ಬೇಡುವ ಜನರು ಮತ್ತು ಮಕ್ಕಳು ಇವರುಗಳ ಬಗ್ಗೆ ಅಂಕಿ ಅಂಶಗಳನ್ನು RWA/NGO ರವರ ಸಹಕಾರದೊಂದಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸುವ ಬಗ್ಗೆ ಚರ್ಚಿಸಲಾಯಿತು.
10. ರಾತ್ರಿ ವಸತಿರಹಿತ ಜನರು ರಸ್ತೆಗಳಲ್ಲಿ ಮಲಗುವುದನ್ನು ಗಮನಿಸಿ ಬಗ್ಗೆ ಅಂಕಿ ಅಂಶಗಳನ್ನು RWA/NGO ರವರ ಸಹಕಾರದೊಂದಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸುವ ಬಗ್ಗೆ ಚರ್ಚಿಸಲಾಯಿತು.
11. ಸ್ಯಾಂಡರ್ಸ್ ರಸ್ತೆ, ಕೋಲ್ಸ್ ರಸ್ತೆಯ ಬೀದಿ ಬದಿಯ ವ್ಯಾಪಾರ ಮಾಡುವುದನ್ನು ತಡೆಹಿಡಿಯಲು ಚರ್ಚಿಸಲಾಯಿತು.
12. ಸ್ಟೇಫನ್ ರಸ್ತೆ ಮತ್ತು ಅಸಯ್ಯ ರಸ್ತೆಯಲ್ಲಿ ಡೆಬ್ರೀಸ್‌ಗಳನ್ನು ತೆರವುಗೊಳಿಸುವ ಬಗ್ಗೆ ಚರ್ಚಿಸಲಾಯಿತು.
13. ಪ್ರೋಮಿನೆಡ್ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿದ್ದು ಈ ಬಗ್ಗೆ ಟ್ರಾಫಿಕ್ ಪೋಲಿಸರಿಗೆ ಮಾಹಿತಿ ನೀಡುವ ಬಗ್ಗೆ ಚರ್ಚಿಸಲಾಯಿತು.
14. ಫ್ರೇಜರ್ ಟೌನ್ RWA ರವರು ಕಾಮಗಾರಿ ಇಲಾಖೆಯಿಂದ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಂಡಿದ್ದು ಮಾಸ್ಕ್ ರಸ್ತೆ ಸ್ಟೀಫನ್ಸ್ ರಸ್ತೆ ಮತ್ತು ರಾಬರ್ಟ್‌ಸನ್ ರಸ್ತೆ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆ ಬಾಕಿ ಇದ್ದು ಈ ಬಗ್ಗೆ ಕ್ರಮಕೈಗೊಳ್ಳಲು ಮನವಿ ಮಾಡಿದರು.

Revenue Officer (Shivajinagar)
Bruhath Bangalore Mahanagara Palike

15. ಇಲ್ಲಿಯವರೆವಿಗೂ ನಡೆದಿರುವ ವಾರ್ಡ್ ಸಮಿತಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಯಾವ ರೀತಿ ಕ್ರಮಗಳು ಜರುಗಿದೆ ಹಾಗೂ ಹಂತಹಂತವಾಗಿ ಪ್ರಗತಿಯಾಗಿರುವ ಬಗ್ಗೆ ಚರ್ಚಿಸಲಾಯಿತು.

16. ಕೋಲ್ಸ್ ರಸ್ತೆಯ ಪಾದಚಾರಿ ರಸ್ತೆಗಳಲ್ಲಿ ದೊಡ್ಡ ಕಲ್ಲುಗಳನ್ನು ಹಾಕಲಾಗಿದ್ದು ಇವುಗಳನ್ನು ತೆಗೆದುಹಾಕಲು ಕಾಮಗಾರಿ ಇಲಾಖೆಯವರಿಗೆ ತಿಳಿಸಲಾಯಿತು.

17. ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜಿಸುವುದನ್ನು ನಿಷೇಧಿಸಲು ಕ್ರಮಕೈಗೊಳ್ಳಲು ಚರ್ಚಿಸಲಾಯಿತು. ಹಾಗೂ ಕಳೆದ ಎರಡು ಸಭೆಗಳಲ್ಲಿ ಚರ್ಚಿಸಿದರೂ ಸಹ ಈ ಬಗ್ಗೆ RWA ರವರು ಕ್ರಮಕೈಗೊಂಡಿಲ್ಲವೆಂದು ತಿಳಿಸಿದರು ಹಾಗೂ ಮೂರು ಜಾಗಗಳನ್ನು ಗುರುತಿಸಿ ಅದರ ಭಾವ ಚಿತ್ರ ಮತ್ತು ನಕ್ಷೆಯನ್ನು ಸಭೆಯಲ್ಲಿ ತೋರಿಸಿದರು.

18. ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಬೆಸ್ಕಾಂ ರವರು ಕೈಗೊಂಡಿರುವ ಕಾಮಗಾರಿಗಳನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ತುರ್ತಾಗಿ ಪೂರ್ಣಗೊಳಿಸಲು ತಿಳಿಸಲಾಯಿತು.

19. ಅಸಯ್ಯ ರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ರಸ್ತೆ ಅಗೆದಿದ್ದು, ಸದರಿ ರಸ್ತೆಗೆ ಡಾಂಬರೀಕರಣ ಮಾಡಲು ತಿಳಿಸಿರುತ್ತಾರೆ.

20. ಅಸಯ್ಯ ರಸ್ತೆಯಲ್ಲಿ ಬೆಸ್ಕಾಂ ರವರು ಪೈಪುಗಳನ್ನು ಅಳವಡಿಸಿದ್ದು ತೆರವುಗೊಳಿಸಲು ತಿಳಿಸಲಾಯಿತು.

21. RWA Frazer Town ರವರು ವಾರ್ಡ್ ವ್ಯಾಪ್ತಿಯ ಮಾಸ್ಕ್ ರಸ್ತೆ, ಮೋರ್ ರಸ್ತೆ, ಆನೆ ಪಾರ್ಕ್ ಹತ್ತಿರ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂಧಿಸಿದ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳಲು ಮನವಿ ಸಲ್ಲಿಸಿದರು. ಕಸ ಎಸೆಯುವ ಸ್ಥಳಗಳಲ್ಲಿ ರಂಗೋಲಿ ಹಾಕಲು ಇಲ್ಲವೇ ದೇವರ ಭಾವ ಚಿತ್ರಗಳನ್ನು ಇಡಲು ಚರ್ಚಿಸಲಾಯಿತು. ವಾಹನಗಳಲ್ಲಿ ಸಂಚರಿಸುತ್ತಾ ಕಸ ಎಸೆಯುವರ ಬಗ್ಗೆ ನಿಗಾ ವಹಿಸಲು ತಿಳಿಸಲಾಯಿತು.

22. ವಾರ್ಡ್ ವ್ಯಾಪ್ತಿಯಲ್ಲಿನ ಮಾರ್ಷಲ್‌ಗಳು ಎಲ್ಲೆಂದರಲ್ಲಿ ಕಸ ಎಸೆಯುತ್ತಿರುವ ಸಾರ್ವಜನಿಕರ ಮೇಲೆ ನಿಗಾವಹಿಸಿ ದಂಢ ವಿಧಿಸಲು ತಿಳಿಸಲಾಯಿತು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಬ್ಬರೇ ಮಾರ್ಷಲ್ ಕಾರ್ಯನಿರ್ವಹಿಸುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಚರ್ಚಿಸಲಾಯಿತು.

23. ಕೋಲ್ಸ್ ರಸ್ತೆ, ಪಂಜಾಬ್ ಸ್ಟೋರ್ಸ್, ಸ್ಯಾಂಡರ್ಸ್ ರಸ್ತೆ ಸಂತೋಷ್ ಹಾಸ್ಪೆಟಲ್ ಹತ್ತಿರ ಸ್ಪೆನ್ಸರ್ ರಸ್ತೆ, ಫ್ರೇಜರ್ ಟೌನ್, Turning point ನಲ್ಲಿ ಫುಟ್‌ಪಾತ್‌ನನ್ನು ಅತಿಕ್ರಮಿಸಿ ರ್‍ಯಾಂಪ್‌ಗಳನ್ನು ಅಳವಡಿಸಿದ್ದರೂ ಸಹ ಕಾಮಗಾರಿ ಇಲಾಖೆರವರು ಯಾವುದೇ ರೀತಿಯ ಕ್ರಮಕೈಗೊಂಡಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಇದುವರೆಗೂ ಕಳೆದ ನಾಲ್ಕು ಸಭೆಗಳಲ್ಲಿ ಈ ಬಗ್ಗೆ ತಿಳಿಸಿದರು ಸಹ ಸ್ಥಳೀಯ AEE & AE ರವರು ಬೇಜಬ್ದಾರಿ ತೋರಿಸಿರುತ್ತಾರೆಂದು ಆರ್‌ಡಬ್ಲ್ಯೂಎ ರವರು ದೂರು ನೀಡಿದರು.

ಈ Turning point ಎದುರುಗಡೆ ಸ್ವತ್ತಿನ ಸಂಖ್ಯೆ:27 ಸ್ಯಾಂಡರ್ಸ್ ರಸ್ತೆ ಹೊಸ ಕಟ್ಟಡ ಇಲ್ಲಿ ಸಾರ್ವಜನಿಕರು ನಡೆದಾಡುವ ಮಾರ್ಗದಲ್ಲಿ ರ್‍ಯಾಂಪ್‌ಗಳನ್ನು ಅಳವಡಿಸಿದ್ದು ಈ ಕಟ್ಟಡ ನಿರ್ಮಾಣದಲ್ಲಿ ನಿಯಮ ಉಲ್ಲಂಘನೆ ಆದರೂ ಬೆಸ್ಕಾಂ ರವರು ವಿದ್ಯುತ್ ಸಂಪರ್ಕವನ್ನು ನೀಡಿರುವುದರ ಬಗ್ಗೆ ಆರ್.ಡಬ್ಲ್ಯೂ.ಎ ರವರು ಪ್ರಶ್ನೆ ಮಾಡಿರುತ್ತಾರೆ ಹಾಗೂ ಬೆಸ್ಕಾಂ ಸಹಾಯಕ ಅಭಿಯಂತರರಾದ ಶ್ರೀ. ಗುರುಮೂರ್ತಿ ರವರು ಸಭೆಗೆ ಗೈರು ಹಾಜರಾಗಿದ್ದು ದೂರವಾಣಿ ಮುಖಾಂತರ ವಿಚಾರಿಸಲಾಗಿ ಎ.ಡಿ.ಟಿ.ಪಿ (ಪೂರ್ವ) ರವರು ಸದರಿ ಸ್ವತ್ತಿಗೆ ಕಟ್ಟಡ ಸ್ವಾಧೀನ ಪ್ರಮಾಣ ಪತ್ರ (OC) ನೀಡಿರುವುದಾಗಿ ತಿಳಿಸಿರುತ್ತಾರೆ. ಈ ಸ್ವಾಧೀನ ಪ್ರಮಾಣ ಪತ್ರದ ಒಂದು ಪ್ರತಿಯನ್ನು ನೋಡಲ್ ಅಧಿಕಾರಿಯವರಿಗೆ ಒದಗಿಸಲು ಸೂಚಿಸಿದೆ.

24. ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮರಗಳನ್ನು ಅಳವಡಿಸಲು ತಿಳಿಸಲಾಯಿತು.

25. ಫ್ರೇಜರ್ ಟೌನ್ ಸುತ್ತ ಮುತ್ತ ಪ್ರದೇಶಗಳಲ್ಲಿ ಹೊಸದಾಗಿ ಕಟ್ಟುತ್ತಿರುವ ಕಟ್ಟಡಗಳ ನಿರುಪಯುಕ್ತ ಕಾಮಗಾರಿ ವಸ್ತುಗಳನ್ನು ಮತ್ತು ಇತರೆ ತ್ಯಾಜ್ಯಗಳನ್ನು ಸಾರ್ವಜನಿಕ ಪ್ರದೇಶಗಳಲ್ಲಿ ಎಸೆಯುತ್ತಿರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಈ ಬಗ್ಗೆ ಕ್ರಮಕೈಗೊಳ್ಳಲು ಆರ್‌ಡಬ್ಲ್ಯೂಎ ರವರು ಮನವಿ ಸಲ್ಲಿಸಿದರು.

Revenue Officer (Shivajinagar)
Bruhath Bangalore Mahanagara Palike



26.ಶ್ರೀ. ನಾಗರಾಜ್, ಶ್ರೀ. ಚಿನ್ನ, ಶ್ರೀ.ರವಿ ಹಾಗೂ ಶ್ರೀಮತಿ ಗಾಯತ್ರಿ ಕಿರಿಯ ಆರೋಗ್ಯ ಪರಿವೀಕ್ಷಕಿ ರವರು ತೃಪ್ತಿಕರವಾಗಿ ಕಾರ್ಯನಿರ್ವಹಿಸಿರುವುದಾಗಿ ಶ್ಲಾಘನೆ ನೀಡಿದರು.

ಈ ಎಲ್ಲಾ ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಆರ್‌ಡಬ್ಲ್ಯೂಎ ರವರು ಸಭೆಯಲ್ಲಿ ಮನವಿ ಸಲ್ಲಿಸಿದರು ನಂತರ ಮುಂದಿನ ಸಭೆಯೊಳಗೆ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ತಿಳಿಸುತ್ತಾ ಮುಂದಿನ ಸಭೆಯಲ್ಲಿ ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರು ವಾರ್ಡ್ ತಪಾಸಣೆ ಕೈಗೊಳ್ಳಲು ಮನವಿ ಮಾಡಿದರು ಹಾಗೂ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

16/1/2021

ಕಾರ್ಯದರ್ಶಿ ಸಂ.ಅ ವಾರ್ಡ್-78

ನೋಡಲ್ ಅಧಿಕಾರಿ ಹಾಗೂ
ಕಂದಾಯ ಅಧಿಕಾರಿ (ಶಿವಾಜಿನಗರ) ವಿಭಾಗ

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ /ಎಸ್.ಡಬ್ಲ್ಯೂಎಂ/ ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.
6. AE Bescom, AE BWSSB, ರವರ ಅವಗಾಹನೆಗಾಗಿ ಕಳುಹಿಸಿದೆ.
7. Crime and Traffic Police Inspectors, Frazer town Police Stations ರವರ ಅವಗಾಹನೆಗಾಗಿ ಕಳುಹಿಸಿದೆ.
8. President, Frazer town RWA and Members ರವರ ಅವಗಾಹನೆಗಾಗಿ ಕಳುಹಿಸಿದೆ.